# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರು ರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು – 560 002.

ಸಂಖ್ಯೆ: ಹೆನಿನಯೋ/ಪಿಆರ್/1093/2018-19 ದಿನಾಂಕ: 07-03-2019.

## ಆದೇಶ

ವಿಷಯ:- ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರಗಳನ್ನು ಆನ್‌ಲೈನ್ ಮೂಲಕವೇ ಪ್ರಕ್ರಿಯಿಸಿ ವಿತರಿಸುವ ಕುರಿತು.

ಉಲ್ಲೇಖ: 1) ಪಾಲಿಕೆಯ ಕಛೇರಿ ಆದೇಶ ಸಂಖ್ಯೆ: ಹೆನಿನಯೋ/ಪಿ.ಆರ್/562/2017-18, ದಿನಾಂಕ: 07-10-2017.

2) ಪಾಲಿಕೆಯ ಆಂತರಿಕ ಕಛೇರಿ ಟಿಪ್ಪಣಿ ಪತ್ರ ಸಂಖ್ಯೆ. ಹೆನಿನಯೋ/ಪಿ.ಆರ್/37/2018-19, ದಿನಾಂಕ: 19-04-2018.

*******

ಸರ್ಕಾರದ ವ್ಯವಹಾರ ಸರಳೀಕರಣ ನೀತಿ (Ease of Doing Business Policy) ಅನುಸಾರ ಎಲ್ಲಾ ಬಗೆಯ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ / ಅನುಮತಿಗಳನ್ನು ಆನ್‌ಲೈನ್ ಮುಖಾಂತರವೇ ಪ್ರಕ್ರಿಯಿಸಿ ವಿತರಿಸುವುದು ಅವಶ್ಯವಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾಗುವ ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕವೇ ಪ್ರಕ್ರಿಯಿಸಿ ವಿತರಿಸಲು ಉಲ್ಲೇಖ (1) ರ ಆದೇಶದಲ್ಲಿ ಈಗಾಗಲೇ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ದಿನಾಂಕ: 01-04-2018 ರಿಂದ ಎಲ್ಲಾ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಕ್ರಿಯಿಸಿ ಅನುಮೋದಿಸುವಂತೆ ಉಲ್ಲೇಖ (2) ರಲ್ಲಿ ಸೂಚನೆ ನೀಡಲಾಗಿತ್ತು.

ದಿನಾಂಕ: 01-04-2018 ರ ನಂತರದಲ್ಲಿ ಆನ್‌ಲೈನ್ ತಂತ್ರಾಂಶದ ತೊಡಕುಗಳು ಉಂಟಾಗಿದ್ದರಿಂದ ಪಾಲಿಕೆಯ ದೈನಂದಿನ ಕಾರ್ಯಗಳ ನಿರ್ವಹಣೆ ದೃಷ್ಟಿಯಿಂದ ಈಗಾಗಲೇ ಸ್ವೀಕೃತವಾಗಿರುವ ಮತ್ತು ಸ್ವೀಕೃತವಾಗುವ ಕಟ್ಟಡ ನಕ್ಷೆ ಮಂಜೂರಾತಿ ಅರ್ಜಿಗಳನ್ನು ವಿಳಂಬಕ್ಕೆ ಆಸ್ಪದ ಕೊಡದೆ ಶೀಘ್ರ ವಿಲೇವಾರಿ ಮಾಡುವ ಸಲುವಾಗಿ ದಿನಾಂಕ: 01-04-2018 ರಿಂದ ಜಾರಿಯಲ್ಲಿರುವ ಉನ್ನತೀಕರಿಸಲಾದ ಅಂತರ್ಜಾಲ ತಂತ್ರಾಂಶದ ಮೂಲಕವೇ. ಪ್ರಸ್ತಾವನೆಗಳನ್ನು ಸ್ವೀಕರಿಸಿ, ದಿನಾಂಕ: 01-04-2018 ರ ಪೂರ್ವದಲ್ಲಿದ್ದಂತಹ ಕಾರ್ಯವಿಧಾನದಂತೆ ಪ್ರಸ್ತಾವನೆಗಳನ್ನು ಪ್ರಕ್ರಿಯಿಸಿ ವಿಲೇವಾರಿ ಮಾಡಲು ಸಂಬಂಧಪಟ್ಟ ಕಛೇರಿ ಮುಖ್ಯಸ್ಥರಿಗೆ ಸೂಚಿಸಲಾಗಿತ್ತು.

ಪ್ರಸ್ತುತ ಕಟ್ಟಡ ನಕ್ಷೆ ಮಂಜೂರಾತಿಗೆ ಅಭಿವೃದ್ಧಿಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶದಲ್ಲಿ (BPAMS) ಪ್ರಸ್ತಾವನೆಗಳನ್ನು Auto DCR ನಲ್ಲಿ ಪರಿಶೀಲಿಸಿ ಪ್ರಕ್ರಿಯಿಸುವಲ್ಲಿ ಸ್ಥಿರತೆ ಕಂಡುಬಂದಿದೆ. ಸ್ವಾಧೀನಾನುಭವ ಪ್ರಮಾಣಪತ್ರ ವಿತರಿಸಲು ತಂತ್ರಾಂಶ ಇನ್ನೂ ಅಭಿವೃದ್ಧಿ ಹಂತದಲ್ಲಿರುತ್ತದೆ. ಹೀಗಾಗಿ ಪ್ರಸ್ತುತ ಕಟ್ಟಡ ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರ ಪ್ರಸ್ತಾವನೆಗಳನ್ನು ಪ್ರಕ್ರಿಯಿಸಿ ವಿತರಿಸಲು ಈ ಕೆಳಕಂಡಂತೆ ಆದೇಶಿಸಿದೆ.

1. ಎಲ್ಲಾ ಬಗೆಯ ಕಟ್ಟಡ ನಕ್ಷೆ ಮಂಜೂರಾತಿ (ಪರಿಷ್ಕೃತ ನಕ್ಷೆ ಮಂಜೂರಾತಿ ಸೇರಿದಂತೆ) ಹಾಗೂ ಪ್ರಾರಂಭಿಕ ಪ್ರಮಾಣಪತ್ರ ಕೋರುವ ಪ್ರಸ್ತಾವನೆಗಳನ್ನು/ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು ಮತ್ತು ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸುವುದನ್ನು ಕಡ್ಡಾಯಗೊಳಿಸಿದೆ.
2. ಕಟ್ಟಡ ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರ ಕೋರಲಾದ ಎಲ್ಲಾ ಬಗೆಯ ಪ್ರಸ್ತಾವನೆಗಳನ್ನು ಆನ್‌ಲೈನ್‌ನಲ್ಲೇ ಪ್ರಕ್ರಿಯಿಸಿ ಸಂಬಂಧಿಸಿದ ತಿಳುವಳಿಕೆ ಪತ್ರ, ಟಿಪ್ಪಣಿಗಳು ಸ್ಥಳ ಪರಿಶೀಲನಾ ವರದಿ, ಶುಲ್ಕ ಪಾವತಿ ಪತ್ರ, ಪರವಾನಗಿ / ಅನುಮತಿ ಪತ್ರ ಮತ್ತು ಮಂಜೂರಾತಿ ನೀಡಲಾದ ನಕ್ಷೆಗಳನ್ನು ಡಿಜಿಟಲ್ ಸಹಿಯೊಂದಿಗೆ ವಿತರಿಸುವುದು.

Office of the I T Advisor
772
21/3/19

3. ಪಾಲಿಕೆಯ ವಿವಿಧ ಇಲಾಖೆಗಳಿಂದ ಅಂದರೆ, ರೆವಿನ್ಯೂ, ಬೃಹತ್ ನೀರುಗಾಲುವೆ, ಕಾನೂನು ಕೋಶ, ರಸ್ತೆ ಮೂಲ ಸೌಕರ್ಯ, ಕೆರೆಗಳು, ಆಸ್ತಿಗಳು ಮತ್ತಿತರ ವಿಭಾಗಗಳಿಂದ ಅಭಿಪ್ರಾಯ / ದಾಖಲಾತಿ ನೀಡುವಾಗ ಆನ್‌ಲೈನ್ ತಂತ್ರಾಂಶದ ಮೂಲಕವೇ ಪ್ರಕ್ರಿಯಿಸುವುದು.
4. 4000 ಚ.ಅಡಿ ವರೆಗಿನ ನಿವೇಶನಗಳಲ್ಲಿ 4 ವಸತಿ ಘಟಕಗಳ ವರೆಗಿನ ವಸತಿ ಕಟ್ಟಡಗಳಿಗೆ (ಸುವರ್ಣ ಪರವಾನಗಿ) ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಕಾರ್ಯಭಾರವನ್ನು ಪಾಲಿಕೆಯ ವಲಯ ಕಛೇರಿಗಳಲ್ಲಿರುವ ಸಹಾಯಕ ನಿರ್ದೇಶಕರು (ನಗರ ಯೋಜನೆ) ನಿರ್ವಹಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಇನ್ನುಳಿದಂತೆ ಪ್ರಸ್ತುತ ಜಾರಿಯಲ್ಲಿರುವ ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ವಿತರಿಸಲು ವಲಯ ಕಛೇರಿಗಳಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
5. 2400 ಚ.ಅಡಿ ವರೆಗಿನ ಏಕ ಘಟಕ ವಸತಿ ಕಟ್ಟಡಗಳಿಗೆ ಮಂಜೂರಾತಿ ನೀಡಲು ಆಯಾ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೀಡಲಾಗಿದ್ದ ಅಧಿಕಾರ ಪ್ರತ್ಯಾಯೋಜನೆಯನ್ನು ಹಿಂಪಡೆಯಲಾಗಿದೆ. ಇನ್ನು ಮುಂದೆ ಉಪವಿಭಾಗಗಳ ಕಾರ್ಯವ್ಯಾಪ್ತಿಯಲ್ಲಿ ನೀಡಲಾಗುತ್ತಿದ್ದ ಕಟ್ಟಡ ನಕ್ಷೆ ಮಂಜೂರಾತಿಗಳನ್ನು ಪಾಲಿಕೆಯ ವಲಯ ಕಛೇರಿಗಳಲ್ಲಿರುವ ಸಹಾಯಕ ನಿರ್ದೇಶಕರು (ನಗರ ಯೋಜನೆ) ಇವರು ನಿರ್ವಹಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

   ಏಕ ವಸತಿ ಘಟಕಗಳುಳ್ಳ ಕಟ್ಟಡ ನಕ್ಷೆ ಮಂಜೂರಾತಿ ಪ್ರಸ್ತಾವನೆಗಳನ್ನು 7 ಕಾರ್ಯದಿನಗಳ ಒಳಗೆ ಪ್ರಕ್ರಿಯಿಸಿ ಮಂಜೂರಾತಿ ನೀಡುವುದು/ವಿಲೇವಾರಿ ಮಾಡುವುದು. ತಪ್ಪಿದಲ್ಲಿ ಅಂತಹ ಸಹಾಯಕ ನಿರ್ದೇಶಕರು (ನಗರ ಯೋಜನೆ) ಮತ್ತು ಸಹಾಯಕ / ಕಿರಿಯ ಅಭಿಯಂತರರನ್ನು ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.
6. ಉಲ್ಲೇಖ (1) ರ ಕಛೇರಿ ಆದೇಶದಲ್ಲಿ ನೀಡಲಾದ ಎಲ್ಲಾ ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸುವುದು.

ಮೇಲ್ಕಂಡ ಮಾರ್ಗಸೂಚಿಗಳನ್ನು ದಿನಾಂಕ 01-04-2019 ರಿಂದ ಕಟ್ಟಡ ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರ ಕೋರುವ ಪ್ರಸ್ತಾವನೆಗಳಿಗೆ ಮಂಜೂರಾತಿ ಪ್ರಕ್ರಿಯೆ ಕೈಗೊಳ್ಳುವಾಗ ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>

1) ವಿಶೇಷ ಆಯುಕ್ತರು (ಯೋಜನೆಗಳು) ರವರಿಗೆ
2) ಹೆಚ್ಚುವರಿ ಆಯುಕ್ತರು (ಆಡಳಿತ) ರವರಿಗೆ
3) ವಿಶೇಷ ಆಯುಕ್ತರು (ಹಣಕಾಸು) ರವರಿಗೆ
4) ಅಪರ / ಜಂಟಿ ಆಯುಕ್ತರು – ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ
5) ಪ್ರಧಾನ ಅಭಿಯಂತರರು ರವರಿಗೆ
6) ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ
7) ಮುಖ್ಯ ಅಭಿಯಂತರರು – ಕೆರೆಗಳು / ಮಳೆ ನೀರುಗಾಲುವೆ / ರಸ್ತೆ ಮೂಲಭೂತ ಸೌಕರ್ಯ ರವರಿಗೆ
8) ಮುಖ್ಯ ಅಭಿಯಂತರರು – ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ
9) ಜಂಟಿ ನಿರ್ದೇಶಕರು, ನಗರ ಯೋಜನೆ – ಉತ್ತರ / ದಕ್ಷಿಣ / ಸ್ಕ್ವಾಡ್) ರವರಿಗೆ
10) ಜಂಟಿ ಆಯುಕ್ತರು (ಕಂದಾಯ) ರವರಿಗೆ
11) ಸಹಾಯಕ ನಿರ್ದೇಶಕರು – ನಗರ ಯೋಜನೆ – ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ಬೊಮ್ಮನಹಳ್ಳಿ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ
12) ಎಲ್ಲಾ ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳಿಗೆ
13) ಸಲಹೆಗಾರರು, ಮಾಹಿತಿ ತಂತ್ರಜ್ಞಾನ ರವರಿಗೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಕಳುಹಿಸಿದೆ.
14) ಕಛೇರಿ ಕಡತಕ್ಕೆ